ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಸೋಮವಾರಪೇಟೆ
ಸಿ.ಸಿ. ನಂ. 312/2025

ಹೆಸರು : ಬಾಲಕೃಷ್ಣ ಬಿ ಎಸ್ ಪಿಡಬ್ಲ್ಯೂ-1

ಗಂಡನ ಹೆಸರು : ಬಿ ಎ ಸೋಮಯ್ಯ ಸಿಡಬ್ಲ್ಯೂ-1

ವಯಸ್ಸು : 59 ವರ್ಷ

ವೃತ್ತಿ : ಅಬಕಾರಿ ಉಪನಿರೀಕ್ಷರು

ವಾಸ ಸ್ಥಳ : ಪಿರಿಯಾಪಟ್ಟಣ

ದಿಃ28.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅಭಿಯೋಜಕರಿಂದ:

ದಿನಾಂಕ 25.10.2022 ರಿಂದ 23.10.2025 ರ ತನಕ ಅಬಕಾರಿ ಉಪನಿರೀಕ್ಷಕರು ವಲಯ ಕಚೇರಿಯಲ್ಲಿ ಸೋಮವಾರಪೇಟೆಯಲ್ಲಿ ಕೆಲಸ ಮಾಡುತಿದ್ದೆ.

ಈ ಪ್ರಕರಕ್ಕೆ ಸಂಬಂದಪಟ್ಟಂತೆ ದಿಃ 04-12-2024 ರಂದು ಇಲಾಖೆ ಸಿಬ್ಬಂದಿಯೊಂದಿಗೆ ಚಾಸಾ 2 ಮತ್ತು 3 ರವರೊಂದಿಗೆ ಕೊಡ್ಲಿಪೇಟೆ ಗ್ರಾಮದಲ್ಲಿ ಸರ್ಕಾರಿ ಇಲಾಖಾ ವಾಹನದಲ್ಲಿ ಗಸ್ತು ತಿರುಗುತ್ತಿರುವಾಗ ಕೊಡ್ಲಿಪೇಟೆ ಬಸ್ ನಿಲ್ದಾಣದ ಹತ್ತಿರ ವಾಹನ ನಿಲಲಿಸಿರುವಾಗ ಒಬ್ಬ ವ್ಯಕ್ತಿಯು ನಮ್ಮ ಸಿಬಂದಿಗಳಾದ ಚಾಸಾ 2 ರವರನ್ನು ಪಕ್ಕಕೆ ಕರೆದು ಅಂಕನಹಳ್ಳಿ ಗ್ರಾಮದ ಚೆನ್ನಮ್ಮ ರವರು ಅಕ್ರಮವಾಗಿ ಮದ್ಯವನ್ನು ಮನೆಯಲ್ಲಿ ಸಂಗ್ರಹಿಸಿಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿರುತ್ತಾರೆಂದು ಸಿಬ್ಬಂದಿಯವರಾದ ಚಾಸಾ-2 ರವರಿಗೆ ಮಾಹಿತಿಯನ್ನು ನೀಡಿರುತ್ತಾರೆ. ಈ ಮಾಹಿತಿಯ ಮೇರೆಗೆ ದೂರು ಅರ್ಜಿಯನ್ನು ಸಿದ್ದಪಡಿಸಿಕೊಂಡು ಚಾಸಾ-2 ರವರು ತನಗೆ ನೀಡಿರುತ್ತಾರೆ, ಕೂಡಲೇ ನಾವು ಸಿಬ್ಬಂದಿಯವರೊಂದಿಗೆ ಸರ್ಕಾರಿ ವಾಹನದಲ್ಲಿ ಹಿಪ್ಪಲಿಗೇಟ್ ಮಾರ್ಗವಾಗಿ ಅಂಕನಹಳ್ಳಿಯ ಕೈಸೇರಿ ಗ್ರಾಮಕ್ಕೆ ಹೋಗಿದ್ದು, ರಸ್ತೆಯಲ್ಲಿ ಹೋಗುವ ಸಮಯದಲ್ಲಿ ಒಬ್ಬ ವ್ಯಕ್ತಿಯನ್ನು ಪಂಚರನ್ನಾಗುವಂತೆ ಕೇಳಿಕೊಂಡ ಮೇರೆಗೆ ಪಂಚರಾಗಲು ನಿರಾಕರಿಸಿರುತ್ತಾರೆ, ನಂತರ ಮತ್ತೊಬ್ಬ ವ್ಯಕ್ತಿಯನ್ನು ಪಂಚರಾಗುವಂತೆ ಕೇಳಿಕೊಂಡಾಗ ಪಂಚರನ್ನಾಗಲು ಆತನು ಒಪ್ಪದೇ ಆರೋಪಿಯ ವಿಳಾಸವನ್ನು ತೋರಿಸಿರುತ್ತಾನೆ.

ನಂತರ ಚನ್ನಮ್ಮಳಾದ ಆರೋಪಿಯ ಮನೆಯ ಹತ್ತಿರ ಹೋಗಿ ಕರೆದಾಗ ಮನೆಯ ಒಳಭಾಗದಿಂದ ಬಂದ ಮಹಿಳೆಯನ್ನು ವಿಚಾರಿಸಿದಾಗ ಚನ್ನಮ್ಮ ಎಂದು

ಒಪ್ಪಿಕೊಂಡಿರುತ್ತಾರೆ, ನಂತರ ಆ ಸಮಯದಲ್ಲಿ ಶೋಧನ ಸಮುಚ್ಚಿನ ಆಧಾರವನ್ನು ತಯಾರಿಸಿಕೊಳ್ಳಲು ನ್ಯಾಯಾಲಯದಿಂದ ತಡವಾಗುವುದರಿಂದ ಸ್ಥಳದಲ್ಲಿ ಶೋಧನಾ ಸಮುಚ್ಚಿತ ಆಧಾರವನ್ನು ತಯಾರಿಸಿಕೊಂಡು ನಾವು ಬಂದಿರುವ ವಿಷಯವನ್ನು ತಿಳಿಸಿ ಪರಸ್ಪರ ಅಂಗಶೋಧನೆ ಮಾಡಿಕೊಂಡು ಇಲಾಖೆಯ ಸಿಬ್ಬಂದಿಗಳನ್ನು ಪಂಚರಾಗಿಸಿಕೊಂಡು ಮನೆಯ ಸುತ್ತ-ಮುತ್ತ ಹಾಗೂ ಮನೆಯ ಒಳಭಾಗವನ್ನು ಪ್ರವೇಶಿಸಿ ಶೋಧನೆ ಮಾಡಲಾಯಿತು. ಆ ಸಮಯದಲ್ಲಿ ಮನೆಯ ಒಳಭಾಗದ ಅಡುಗೆ ಮನೆಯ ಕೊಣೆಯಲ್ಲಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಇರುವುದು ಪತ್ತೆಹಚ್ಚಿರುತ್ತಾರೆ. ನಂತರ ಚನ್ನಮ್ಮರವರ ಸಮ್ಮುಖದಲ್ಲಿ ಚೀಲವನ್ನು ತೆರೆದು ನೋಡಿದಾಗ 90 ಮಿಲಿಯ 46 ಒರಿಜಿನಲ್ ಚಾಯ್ಸ್ ಬ್ರಾಂಡಿಯ ಟೆಟ್ರಾಪ್ಯಾಕುಗಳು ದೊರೆತಿರುವುದು ಕಂಡುಬಂದಿರುತ್ತದೆ, ನಂತರ ನಾವುಗಳು ಯಾವ ರೀತಿ ಸಂಗ್ರಹ ಮಾಡಿಕೊಂಡಿರುವುದಾಗಿ ವಿಚಾರಿಸಿದಾಗ ಮಾರಾಟದ ಸಲುವಾಗಿ ಇಟ್ಟುಕೊಂಡಿರುವುದಾಗಿ ತಿಳಿಸಿರುತ್ತಾರೆ. ಮಾರಾಟ ಮಾಡಲು ರಹದಾರಿ ಇದೆಯಾ ಎಂದು ಕೇಳಿದಾಗ ಇಲ್ಲ ಎಂದು ತಿಳಿಸಿರುತ್ತಾರೆ.

3. ನಂತರ ಟೆಟ್ರಾಪ್ಯಾಕುಗಳಲ್ಲಿ ಬ್ಯಾಚ್ ನಂಬರ್ ಮತ್ತು ಲೇಬಲ್ ನಂಬರುಗಳನ್ನು ಬರೆದಿದ್ದು, ಅವುಗಳನ್ನು ಸ್ಥಳದಲ್ಲಿ ನಮೂನೆ 1 ರಲ್ಲಿ ನಮೂದಿಸಿ ದೊರೆತ ಎಲ್ಲಾ ಟೆಟ್ರಾಪ್ಯಾಕುಗಳಲ್ಲಿ ನಮೂದಿಸಲಾಯಿತು, ಅಲ್ಲಿ ದೊರೆತ ಎಲ್ಲಾ ಟೆಟ್ರಾಪ್ಯಾಕುಗಳನ್ನು ರಸಾಯನಿಕ ಪರೀಕ್ಷೆಗಾಗಿ ಮಾದರಿಯನ್ನು ತೆಗೆದು, ಬಿಳಿ ಬಟ್ಟೆಯಿಂದ ಸುತ್ತಿ, ಇಲಾಖೆಯ ಮುದ್ರೆಯನ್ನು ನಮೂದಿಸಿ ಮಾದರಿ ಚೀಟಿಗಳನ್ನು ಅಂಟಿಸಿ, ಇಲಾಖಾ ವಶಕ್ಕೆ ಪಡೆಯಲಾಯಿತು. ನಂತರ ಸ್ಥಳದಲ್ಲಿ ಮಹಜರು ತಯಾರಿಸಿ, ಮಹಜರನ್ನು ಬೆಳಗ್ಗೆ 8.30 ರಿಂದ 9.25 ರವರೆಗೆ ಮಾಡಲಾಯಿತು. ನಂತರ ಆರೋಪಿಗೆ ನೋಟಿಸನ್ನು ನೀಡಿ ತುರ್ತು ಸಮಯದಲ್ಲಿ ಕಚೇರಿಗೆ ವಿಚಾರಣೆಯ ಸಮಯದಲ್ಲಿ ಹಾಜರಾಗಬೇಕೆಂದು ತಿಳಿಸಲಾಯಿತು. ನಂತರ ದೊರೆತ ಎಲ್ಲಾ ಮದ್ಯವನ್ನು ಇಲಾಖಾ ವಶಕ್ಕೆ ಒಪ್ಪಿಸಲಾಯಿತು. ಠಾಣೆಗೆ ಬಂದು ಆರೋಪಿಯ ವಿರುದ್ದ ಪ್ರ.ವ.ವರದಿಯನ್ನು ದಾಖಲಿಸಲಾಯಿತು. ಮುಂದಿನ ತನಿಖೆಗಾಗಿ ಕಡತ ಮತ್ತು ಮದ್ಯವನ್ನು ಚಾಸಾ-7 ರವರಿಗೆ ವಹಿಸಲಾಯಿತು.

4. ದೂರನ್ನು ನಿಪಿ-1 ಸಾಕ್ಷಿಯ ಸಹಿಯನ್ನು ನಿಪಿ-1(ಎ), ಪ್ರ.ವ.ವರದಿಯನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ)ಎಂದು, ಶೋಧನಾ ಸಮುಚ್ಚಿತ ಅಧಾರವನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ)ಎಂದು, ಸ್ಥಳಮಹಜರನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಪಿ-(ಎ)ಎಂದು, ಮಾದರಿ

ಮೊಹರನ್ನು  ನಿಪಿ-5 ಎಂದು ಸಾಕ್ಷಿಯ ಸಹಿಯನ್ನು ನಿಪಿ-5(ಎ)ಎಂದು, ಎರಡು ಫೋಟೋಗಳನ್ನು ನಿಪಿ-6 ಎಂದು, ನಮೂನೆ-1 ಅನ್ನು ನಿಪಿ-7 ಎಂದು ಸಾಕ್ಷಿಯ ಸಹಿಯನ್ನು ನಿಪಿ-7(ಎ)ಎಂದು, 63,4(ಸಿ) ಭಾ.ಸಾ.ಅಧಿನಿಯಮದ ದೃಡೀಕರಣ ಪತ್ರ ವನ್ನು ನಿಪಿ-8 ಎಂದು ಸಾಕ್ಷಿಯ ಸಹಿಯನ್ನು ನಿಪಿ-8(ಎ)ಎಂದು, ಸಿಡಿ- ಅನ್ನು ನಿಪಿ-9 ಎಂದು ಗುರುತಿಸಲಾಯಿತು. 46 ಒರಿಜಿನಲ್ ಚಾಯ್ಸ್ ನ ಟೆಟ್ರಾಪ್ಯಾಕೇಟುಗಳನ್ನು ಒಟ್ಟಾಗಿ ಮು.ಮಾ-1 ಎಂದು, ಬಿಳಿ ಪ್ಲಾಸ್ಟಿಕ್ ಚೀಲವನ್ನು ಮು.ಮಾ.2 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

ಪಾಟೀ ಸವಾಲುಃ ಶ್ರೀ.ಕೆ.ಹೆಚ್.ವಿ  ವಕೀಲರಿಂದ:

*

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸರಿ ಇದೆ.

sd/-

ಸಿ.ಜೆ.ಮತ್ತು ಪ್ರ.ದ.ನ್ಯಾ .ದಂ

ಸೋಮವಾರಪೇಟೆ